**3 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ,**

**ಬೆಂಗಳೂರು ನಗರ**

**ಸಿ.ಸಿ.ನಂ.2963/2021**

ಫಿರ್ಯಾದಿದಾರರ ಹೆಸರುಃ ಕರ್ನಾಟಕ ಸರ್ಕಾರದ ಪರವಾಗಿ ಹಲಸೂರು ಗೇಟ್ ಆರಕ್ಷಕ ಠಾಣೆ

ವಿರುದ್ದ

ಆರೋಪಿಃ 1. ದೊರೇಸ್ವಾಮಿ ಎಂ

## ದೋಷಾರೋಪಣೆ

ಬೆಂಗಳೂರಿನ 3 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿ ಪರಶುರಾಮ ಎಫ್. ದೊಡ್ಡಮನಿ ಆದ ನಾನು, ಆರೋಪಿಯಾದ ನಿನ್ನ ಮೇಲೆ ಕೆಳಗಿನಂತೆ ದೋಷಾರೋಪಣೆ ಹೊರಿಸುತ್ತಿದ್ದೇನೆ.

ದೋಷಾರೋಪಣಾ ಪಟ್ಟಿಯಲ್ಲಿರುವ 1 ನೇ ಆರೋಪಿ ದೊರೆಸ್ವಾಮಿ ಎಂ ನೀನು ಹಲಸೂರು ಗೇಟ್ ಪೊಲೀಸ್ ಠಾಣಾ ವ್ಯಾಪ್ತಿಯ ನೃಪತುಂಗ ರಸ್ತೆಯಲ್ಲಿರುವ **ಮ್ಯಾಜಿಸ್ಟ್ರೇಟ್** ನ್ಯಾಯಾಲಯದ ಕಾಂಪೌಂಡ್ ಒಳಭಾಗದಲ್ಲಿರುವ ಕರ್ನಾಟಕ ಬ್ಯಾಂಕ್‌ನಲ್ಲಿ ಮ್ಯಾನೇಜರ್ ಆಗಿ 2015-2017 ನೇ ಸಾಲಿನವರೆಗೆ ಕರ್ತವ್ಯ ನಿರ್ವಹಿಸಿರುವಿರೆಂದು, 2017 ಸಾಲಿನ ಡಿಸೆಂಬರ್ ತಿಂಗಳಲ್ಲಿ ಕರ್ನಾಟಕ ಬ್ಯಾಂಕ್‌ನಲ್ಲಿ ವಿವಿಧ ಸಾಲಗಳಿಗೆ ಸಾರ್ವಜನಿಕರು ಓ.ಡಿ.ಎ.ಡಿ ಖಾತೆಯನ್ನು ತೆರೆದಿದ್ದರೆಂದು, ನೀವು ಈ ಖಾತೆದಾರರಲ್ಲಿ ಶ್ರೀಮತಿ.ಯಾಮಿನಿ, ಶ್ರೀಮತಿ.ಯಶಸ್ವಿನಿ ಮತ್ತು ಮಿಥುನ್ ಹೆಚ್.ಜೆ. ಎಂಬುವವರ ಖಾತೆಯಿಂದ ಅವರ ಅನುಮತಿ ಇಲ್ಲದೆ ವಿವಿಧ ದಿನಾಂಕಗಳಂದು ಸುಮಾರು 201-50 ಕೋಟಿ ರೂಪಾಯಿಗಳ ಹಣವನ್ನು ತೆಗೆದುಕೊಂಡು, ನಂತರ ದಿನಾಂಕ 04.12.2017 ರಂದು 7 ನೇ ಸಾಕ್ಷಿ ಪ್ರದೀಪ್ ಮತ್ತು 8 ನೇ ಸಾಕ್ಷಿ ಮಂಜುನಾಥ್ ಎಂ ಮತ್ತು ಇತರೆಯವರ ಖಾತೆಗಳಿಗೆ ಜಮಾ ಮಾಡಿ ಸದರಿ ಖಾತೆದಾರರಿಗೆ ನಂಬಿಕೆ ದ್ರೋಹವೆಸಗಿ ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.409 ರ ಅಡಿಯಲ್ಲಿ ದಂಡನೀಯವಾದ ಅಪರಾಧ ಎಸಗಿರುವಿರೆಂದು,

ಮೇಲೆ ಹೇಳಿದ ಸಮಯ ಮತ್ತು ಸ್ಥಳದಲ್ಲಿ 1 ನೇ ಆರೋಪಿಯಾದ ನೀನು ಮೋಸ ಮಾಡುವ ಉದ್ದೇಶದಿಂದ ಶ್ರೀಮತಿ.ಯಾಮಿನಿ, ಶ್ರೀಮತಿ.ಯಶಸ್ವಿನಿ ಮತ್ತು ಮಿಥುನ್ ಹೆಚ್.ಜೆ.

ಎಂಬುವವರ ಖಾತೆಯಿಂದ ಅವರ ಅನುಮತಿ ಇಲ್ಲದೆ ವಿವಿಧ ದಿನಾಂಕಗಳಂದು ಸುಮಾರು 201-50 ಕೋಟಿ ರೂಪಾಯಿಗಳ ಹಣವನ್ನು ತೆಗೆದುಕೊಂಡು, ನಂತರ ದಿನಾಂಕ 04.12.2017 ರಂದು 7 ನೇ ಸಾಕ್ಷಿ ಪ್ರದೀಪ್ ಮತ್ತು 8 ನೇ ಸಾಕ್ಷಿ ಮಂಜುನಾಥ್ ಎಂ ಮತ್ತು ಇತರೆಯವರ ಖಾತೆಗಳಿಗೆ ಜಮಾ ಮಾಡಿ ಸದರಿ ಖಾತೆದಾರರಿಗೆ ಆರ್ಥಿಕ ನಷ್ಟವನ್ನುಂಟು ಮಾಡಿ ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.418 ರ ಅಡಿಯಲ್ಲಿ ದಂಡನೀಯವಾದ ಅಪರಾಧ ಎಸಗಿರುವಿರೆಂದು,

ಮೇಲೆ ಹೇಳಿದ ಸಮಯ ಮತ್ತು ಸ್ಥಳದಲ್ಲಿ 1 ನೇ ಆರೋಪಿಯಾದ ನೀನು ಶ್ರೀಮತಿ.ಯಾಮಿನಿ, ಶ್ರೀಮತಿ.ಯಶಸ್ವಿನಿ ಮತ್ತು ಮಿಥುನ್ ಹೆಚ್.ಜೆ. ಎಂಬುವವರ ಖಾತೆಯಿಂದ ಅವರ ಅನುಮತಿ ಇಲ್ಲದೆ ವಿವಿಧ ದಿನಾಂಕಗಳಂದು ಸುಮಾರು 201-50 ಕೋಟಿ ರೂಪಾಯಿಗಳ ಹಣವನ್ನು ತೆಗೆದುಕೊಂಡು, ನಂತರ ದಿನಾಂಕ 04.12.2017 ರಂದು 7 ನೇ ಸಾಕ್ಷಿ ಪ್ರದೀಪ್ ಮತ್ತು 8 ನೇ ಸಾಕ್ಷಿ ಮಂಜುನಾಥ್ ಎಂ ಮತ್ತು ಇತರೆಯವರ ಖಾತೆಗಳಿಗೆ ಜಮಾ ಮಾಡಿ, ಮಾನ್ಯ ಪ್ರಧಾನ ಸಿಟಿ ಸಿವಿಲ್ ನ್ಯಾಯಾಲಯದ ನ್ಯಾಯಾಧೀಶರ ಲ್ಯಾಂಡ್ ಅಕ್ವೀಜೇಷನ್ ಕೇಸ್ (ಎಲ್.ಎ.ಸಿ.56/12 ಮತ್ತು ಎಲ್.ಎ.ಸಿ.66/12) ರಲ್ಲಿ ಅನುಕ್ರಮವಾಗಿ ಡಿಪಾಸಿಟ್ ಠೇವಣಿಯ ನಕಲಿ ದಾಖಲೆಗಳನ್ನು ಬ್ಯಾಂಕ್‌ನಲ್ಲಿಯೇ ಸೃಷ್ಟಿಸಿಕೊಂಡು ಸದರಿ ಖಾತೆಯಲ್ಲಿ ಇರುವ ಸಾರ್ವಜನಿಕರ ಹಣವನ್ನು ಸ್ವಂತಕ್ಕೆ ತೆಗೆದುಕೊಂಡು ಅದೇ ದಿನ ಸದರಿಯವರ ಖಾತೆಗೆ ಹಣವನ್ನು ವಾಪಸ್ಸು ಹಾಕಿ ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.477 ಎ ರ ಅಡಿಯಲ್ಲಿ ದಂಡನೀಯವಾದ ಅಪರಾಧ ಎಸಗಿರುವಿರೆಂದು,

ಮೇಲೆ ಹೇಳಿದ ಸಮಯ ಮತ್ತು ಸ್ಥಳದಲ್ಲಿ 1 ನೇ ಆರೋಪಿಯಾದ ನೀನು ಮೋಸ ಮಾಡುವ ಉದ್ದೇಶದಿಂದ ಶ್ರೀಮತಿ.ಯಾಮಿನಿ, ಶ್ರೀಮತಿ.ಯಶಸ್ವಿನಿ ಮತ್ತು ಮಿಥುನ್ ಹೆಚ್.ಜೆ. ಎಂಬುವವರ ಖಾತೆಯಿಂದ ಅವರ ಅನುಮತಿ ಇಲ್ಲದೆ ವಿವಿಧ ದಿನಾಂಕಗಳಂದು ಸುಮಾರು 201-50 ಕೋಟಿ ರೂಪಾಯಿಗಳ ಹಣವನ್ನು ತೆಗೆದುಕೊಂಡು, ನಂತರ ದಿನಾಂಕ 04.12.2017 ರಂದು 7 ನೇ ಸಾಕ್ಷಿ ಪ್ರದೀಪ್ ಮತ್ತು 8 ನೇ ಸಾಕ್ಷಿ ಮಂಜುನಾಥ್ ಎಂ ಮತ್ತು ಇತರೆಯವರ ಖಾತೆಗಳಿಗೆ ಜಮಾ ಮಾಡಿ, ಮಾನ್ಯ ಪ್ರಧಾನ ಸಿಟಿ ಸಿವಿಲ್ ನ್ಯಾಯಾಲಯದ ನ್ಯಾಯಾಧೀಶರ ಲ್ಯಾಂಡ್ ಅಕ್ವೀಜೇಷನ್ ಕೇಸ್ (ಎಲ್.ಎ.ಸಿ.56/12 ಮತ್ತು ಎಲ್.ಎ.ಸಿ.66/12) ರಲ್ಲಿ ಅನುಕ್ರಮವಾಗಿ ಡಿಪಾಸಿಟ್ ಠೇವಣಿಯ ನಕಲಿ ದಾಖಲೆಗಳನ್ನು

ಬ್ಯಾಂಕ್‌ನಲ್ಲಿಯೇ ಸೃಷ್ಟಿಸಿಕೊಂಡು ಸದರಿ ಖಾತೆಯಲ್ಲಿ ಇರುವ ಸಾರ್ವಜನಿಕರ ಹಣವನ್ನು ಸ್ವಂತಕ್ಕೆ ತೆಗೆದುಕೊಂಡು ಅದೇ ದಿನ ಸದರಿಯವರ ಖಾತೆಗೆ ಹಣವನ್ನು ವಾಪಸ್ಸು ಹಾಕಿ ಮೋಸ ಮಾಡಿ ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.420 ರ ಅಡಿಯಲ್ಲಿ ದಂಡನೀಯವಾದ ಅಪರಾಧ ಎಸಗಿರುವಿರೆಂದು ನಿನ್ನ ಮೇಲೆ ಆಪಾದಿಸಲಾಗಿದೆ.

ಮೇಲೆ ಹೇಳಿದ ದೋಷಾರೋಪಣೆ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಡತಕ್ಕದ್ದು ಎಂದು ನಿರ್ದೇಶಿಸುತ್ತೇನೆ.

ಪ್ರ:1 ನಿನ್ನ ಮೇಲಿನ ಆಪಾದನೆ ತಿಳಿಯಿತೆ ?

ಉ: 1 ನೇ ಆರೋಪಿ:

ಪ್ರ:2 ನಿನ್ನ ಮೇಲಿನ ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿಯೋ ಅಥವಾ ವಿಚಾರಣೆ ಬಯಸುವೆಯೋ ?

ಉ: 1 ನೇ ಆರೋಪಿ:

(ಮೇಲಿನ ದೋಷಾರೋಪಣೆಯನ್ನು ಆರೋಪಿಗೆ ದೃಶ್ಯ ಮಾಧ್ಯಮದ ಮೂಲಕ ಗೊತ್ತಿರುವ ಕನ್ನಡ ಭಾಷೆಯಲ್ಲಿ ಓದಿ ಹೇಳಿ ವಿವರಿಸಲಾಗಿ ಆತನು ನೀಡಿದ ಉತ್ತರವನ್ನು ಬರೆದುಕೊಳ್ಳಲಾಗಿದೆ. ಆ ಸಮಯದಲ್ಲಿ ಆರೋಪಿಯ ಪರ ವಕೀಲರು ಹಾಜರಿದ್ದಾರೆ).

ದಿನಾಂಕ:18.10.2022

3 ನೇ ಎ.ಸಿ.ಎಂ.ಎಂ ನ್ಯಾಯಾಲಯ,
ಬೆಂಗಳೂರು.